841 ನೇಮಕಾತಿಗಳಲ್ಲಿ, ಸ್ವಯಂ ನಿವೃತ್ತಿ ಯೋಜನೆಯಲ್ಲಿ ಹಣಕಾಸಿನ ಸೌಲಭ್ಯಕ್ಕೆ ಬದಲಾಗಿ ಮಕ್ಕಳಿಗೆ ಕೆಲಸ ನೀಡಿರುವುದು 440, ಅನುಕಂಪದ ಆಧಾರದ ಮೇಲೆ 173 ನೌಕರರು, ಭದ್ರತಾ ವಿಭಾಗಕ್ಕೆ (ಮಾಜಿ ಸೈನಿಕರು) 52 ನೌಕರರು, 12 ಪೂರ್ಣಗೊಂಡ ನೌಕರರ ಪುನರ್ ನೇಮಕ, 70 ಭೂಮಿ ಕಳೆದುಕೊಂಡವರಿಗೆ ಮತ್ತು ಸ್ಥಳೀಯರಿಗೆ, 94 ನೇರ ನೇಮಕಾತಿಗೊಂಡ ನೌಕರರು.

890(1522 ಡಾ॥ ಅನ್ನದಾನಿ ಕೆ. (ಮಳವಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರದಲ್ಲಿ ಹೆಚ್ಚುತ್ತಿರುವ ಅಪರಾಧಗಳ ಪ್ರಮಾಣವನ್ನು ನಿಯಂತ್ರಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಅಪರಾಧಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1.ಹಗಲು ರಾತ್ರಿ ಗಸ್ತು ವ್ಯವಸ್ಥೆಯನ್ನು ಠಾಣಾ ವ್ಯಾಪ್ತಿಯಲ್ಲಿ ಬಿಗಿಗೊಳಿಸಲಾಗಿದೆ.

2. ಚೇತಾ ಮತ್ತು ಹೊಯ್ಸಳ ವಾಹನಗಳ ಗಸ್ತು ವ್ಯವಸ್ಥೆ ಹಗಲು ಮತ್ತು ರಾತ್ರಿ ಮಾಡಲಾಗುತ್ತಿದೆ.

3. ಅಪರಾಧಗಳನ್ನು ಎಸಗುವ ಎಂ.ಓ. ಕ್ರಿಮಿನಲ್ಸ್‌ಗಳ ಪತ್ತೆ ಹಚ್ಚಿ ಪ್ರಶ್ನಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

4. ನಾಕಾಬಂದಿ ಕಾರ್ಯಕ್ರಮ ನಡೆಸುತ್ತಿದ್ದು ಅಪರಾಧಿಗಳನ್ನು ಪತ್ತೆ ಹಚ್ಚಲಾಗುತ್ತಿದೆ.

5. ಹಿರಿಯ ನಾಗರೀಕರನ್ನು ಗುರುತಿಸಿ ಅವರ ಮನೆಗಳ ಬಳಿ ವಿಶೇಷ ಗಸ್ತು ವ್ಯವಸ್ಥೆ ಮಾಡಲಾಗಿದ್ದು ಈ ಬೀಟ್ ವ್ಯವಸ್ಥೆ ಹಾಕಲಾಗಿದೆ.

6. ರೌಡಿ ಚಟುವಟಿಕೆಗಳ ಮೇಲೆ ಸದಾ ನಿಗಾವಹಿಸಿ ಅವರಿಂದ ಯಾವುದೇ ಅಪರಾಧಗಳು ಕಾನೂನು ಬಾಹಿರ ಚಟುವಟಿಕೆಗಳು ನಡೆಯದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.

7. ಪೊಲೀಸ್ ಇನ್ಸ್‌ಪೆಕ್ಟರ್, ಎಸಿಪಿ. ಹಾಗೂ ಡಿಸಿಪಿ ರವರುಗಳಿಗೆ ಪ್ರತಿರಾತ್ರಿ ಸರದಿ ಮೇರೆಗೆ ರಾತ್ರಿಗಸ್ತು ನಡೆಯುತ್ತಿದೆ.

892(154) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತೀರ್ಥಹಳ್ಳಿ ಪಟ್ಟಣದ ಹೊರ ವಲಯದಲ್ಲಿ ಅಕ್ರಮವಾಗಿ ಕಲ್ಲು ಬಂಡೆಯ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಇಲಾಖಾ ಮುಖ್ಯಸ್ಥರ ಗಮನಕ್ಕೆ ತಂದಿದ್ದರೂ, ನಿರ್ದೇಶಕರಿಗೆ ಪತ್ರ ಬರೆದಿದ್ದರೂ, ಕೂಡ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳದೆ ಇನ್ನೂ ಮುಂದುವರಿಸಿರುವುದಕ್ಕೆ ಕಾರಣಗಳೇನು;

ಇ) ಈ ಪ್ರದೇಶದಲ್ಲಿ ಕಂದಾಯ ಇಲಾಖೆ ಹಾಗೂ ಭೂವಿಜ್ಞಾನ ಇಲಾಖೆ ಜೊತೆಗೂಡಿ ಜಂಟಿ ಸರ್ವೆ ಕಾರ್ಯ ನಡೆಸಲು ಆದೇಶವಾಗಿದೆಯೇ; ಮಾಡದಿದ್ದಲ್ಲಿ, ಯಾವಾಗ ಮಾಡಲಾಗುವುದು; ಇನ್ನೂ ಸರ್ವೆ ಕಾರ್ಯ ನಡೆಸದಿರಲು ಕಾರಣಗಳೇನು;